ಪ್ರಮಾಣೀಕರಿಸಲಾದ ದಿನಾಂಕಃ- **18.07.2025.**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ ಬಿ ಎ ವಕೀಲರಿಂದಃ-</u>

ಆರೋಪಿ ಚಿಕ್ಕ ವಯಸ್ಸಿನಿಂದ ಪರಿಚಯ ಎಂದರೆ ಸರಿ. ನಮ್ಮಗಳ ವೈಯಕ್ತಿಕ ವಿಚಾರಗಳು ಪರಸ್ಪರ ಗೊತ್ತಿರುತ್ತದೆ ಎಂದರೆ ಸರಿ. ಈ ಪ್ರಕರಣ ದಾಖಲದಾಗಿನಿಂದ ಆರೋಪಿಯ ಮೊಬೈಲ್ ನಂಬರ್ ಇಲ್ಲ, ಅದರ ಮುಂಚೆ ಇತ್ತು. ಹಣಕಾಸಿನ ವ್ಯವಹಾರಕ್ಕೆ ಈ ಮೊದಲು ಮಾತನಾಡಿಕೊಳ್ಳುತ್ತಿದ್ದೆವು. ನನಗೆ 3 ಬ್ಯಾಂಕ್‌ಗಳಲ್ಲಿ ಖಾತೆ ಇದೆ. 2 ತಿಂಗಳ ಹಿಂದೆ ಹಣ ಬೇಕು ಎಂದು ಕೇಳಿದ್ದು ನಾನು ಮನೆಯಲ್ಲಿ ನನ್ನ ಹೆಂಡತಿಯ ಸಮಕ್ಷಮ ಕೊಟ್ಟಿರುತ್ತೇನೆ. ಮನೆಯಲ್ಲಿ ನಗದು ಹಣವಿತ್ತು. ಒಂದು ವಾರದ ಹಿಂದಿನಿಂದ ಆ ಹಣವನ್ನು ಇಟ್ಟಿದ್ದೆ. ನಗದು ಹಣ ಕಾಫಿಯಿಂದ ಬಂದ ಹಣ ಬ್ಯಾಂಕ್‌ಗೆ ಜಮಾ ಮಾಡಲು ತೊಂದರೆ ಇರಲಲ್ಲ, ಆಳುಗಳ ಮತ್ತು ಗೊಬ್ಬರ ಖರ್ಚಿಗೆ ಬೇಕು ಎಂದು ಹಣವನ್ನು ಮನೆಯಲ್ಲಿ ಇಟ್ಟುಕೊಂಡಿದ್ದೆ. ಆರೋಪಿ ಪರಿಚಯಸ್ಥರಾದ ಕಾರಣಕ್ಕೆ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ.

ಯಾವುದೇ ಕರಾರು ಹಣ ಕೊಡುವುದಕ್ಕೆ ಮಾಡಿಕೊಳ್ಳಲಿಲ್ಲ. ನಾನು ಆರೋಪಿಯ ಮನೆಗೆ ಆಗಾಗ ಹೋಗಿ ಬರುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯ ಜೊತೆ ಸಲುಗೆಯಿಂದ ವರ್ತಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯ ಜೊತೆ ಆಚೆ ಸುತ್ತಾಡುತ್ತಿದ್ದೆ ಎಂದರೆ ಹುಣಸೂರಿನಲ್ಲಿ ಆಡು ಫಾರಂ ಮಾಡಲು ಜೊತೆ ಹೋಗಿದ್ದೆ. ನಾವಿಬ್ಬರೂ ಆಚೆ ಹೋದಾಗ ಫೋಟೋಸ್ ತೆಗೆದುಕೊಂಡಿದ್ದೆವು ಎಂದರೆ, ಆರೋಪಿಯು ಮೋಸ ಮಾಡಲು ತೆಗೆಯುತ್ತಿದ್ದರು. ನಾನು ಆರೋಪಿ ಜೊತೆ Live in relationship ಇದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು 3 ಫೋಟೋಗಳನ್ನು ಆರೋಪಿ ಮನೆಯಲ್ಲಿ ತೆಗೆದಿದ್ದು ಅವುಗಳನ್ನು ನೋಡಿ ಒಪ್ಪಿದ್ದು, ಅವುಗಳನ್ನು ನಿ. ಡಿ 1 ರಿಂದ 3 ಎಂದು ಗುರುತಿಸಲಾಯಿತು.

ಜೊತೆಯಲ್ಲಿದ್ದಾಗ ಆರೋಪಿ ನನ್ನಿಂದ ಹಣ ಪ್ರೀತಿ ವಿಶ್ವಾಸದಿಂದ ರೂ. 60 ಸಾವಿರ ಹಣ ಪಡೆದುಕೊಂಡಿದ್ದರು. ಆಗ ನಾನು ಆರೋಪಿಯ ಸಹಿ ಹಾಕಿರುವ ಖಾಲಿ ಚೆಕ್ ಅನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಈ ರೂ. 60 ಸಾವಿರ ಹಣ ವಾಪಸ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಹಣ ಕೊಟ್ಟ ನಂತರ ಈ ಖಾಲಿ ಚೆಕ್ ಅನ್ನು ಹಿಂದಿರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. Live in relationship ಅನ್ನು ದುರುಪಯೋಗಪಡಿಸಿಕೊಂಡು ಆಕೆಯನ್ನು ಬ್ಲಾಕ್ ಮೇಲ್ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ಸಂಬಂಧವನ್ನು ಮುಂದುವರೆಸದ ಕಾರಣಕ್ಕೆ ಈ ಚೆಕ್ ಅನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ರೂ. 4 ವರೆ ಲಕ್ಷ ಹಣ ಕೊಡುವಷ್ಟು ಸಾಮರ್ಥ್ಯವಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ